೩

# ಸಂಸ್ಕೃತಿಯ ಭವ್ಯ ಪ್ರತೀಕ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠ


**ನಾ**ಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಠಗಳು ಬಹುಮುಖ್ಯ ಪಾತ್ರವನ್ನು ವಹಿಸಿವೆ. ಈ ಮಠಗಳು ಧಾರ್ಮಿಕ, ಆಧ್ಯಾತ್ಮದ ಜೊತೆಗೆ ಶೈಕ್ಷಣಿಕ ರಂಗದಲ್ಲೂ ತಮ್ಮದೇ ಆದ ಕಾಣಿಕೆ ನೀಡುತ್ತ ಬಂದಿವೆ. ಅಂತೆಯೇ ಈ ಮಠಗಳು ಪ್ರಾಚೀನ ಕಾಲದಲ್ಲಿ ಶಿಕ್ಷಣ ಕೇಂದ್ರಗಳೂ ಆಗಿದ್ದವು.[೧] 'ಮಠ' ಎಂಬ ಶಬ್ದದ ಅರ್ಥವೇ ವಿದ್ಯಾಪ್ರಧಾನ ಕೇಂದ್ರ ಎಂದು ಸೂಚಿಸುತ್ತದೆ. ಅಲ್ಲಿ ವೇದ ಉಪನಿಷತ್ತು, ಷಡ್ದರ್ಶನಗಳು, ಕಾವ್ಯ, ಛಂದಸ್ಸು ನಿರುಕ್ತ ಮೊದಲಾದವುಗಳು ಬೋಧಿಸಲ್ಪಡುತ್ತಿದ್ದವು. ಪ್ರಾಚೀನ ಕಾಲದಲ್ಲಿ ಋಷ್ಯಾಶ್ರಮಗಳು, ಬೌದ್ಧ ವಿಹಾರಗಳು, ಜೈನ ಕ್ಷೇತ್ರಗಳು ಘಟಿಕಾಸ್ಥಾನಗಳಾಗಿದ್ದಂತೆ; ನಂತರದ ದಿನಗಳಲ್ಲಿ ಅಗ್ರಹಾರಗಳು, ವೀರಶೈವ ಮಠಗಳು ವಿದ್ಯಾದಾನಗೈಯುತ್ತ ಪ್ರಾಚೀನ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬಂದವು. ಕರ್ನಾಟಕದ ಅನೇಕ ಮಠಗಳು ಈ ಪರಂಪರೆಯನ್ನು ಈಗಲೂ ಮುಂದುವರೆಸಿಕೊಂಡು ಬರುತ್ತಿರುವುದನ್ನು ನಾವು ನೋಡಬಹುದಾಗಿದೆ. ಅದೇಸಾಲಿನಲ್ಲಿ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠವೂ ಬರುತ್ತದೆ.

ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರ ಚಿತ್ತಾಪೂರದಿಂದ ಕೇವಲ ೧೦ ಕಿ.ಮೀ. ದೂರದಲ್ಲಿರುವ ರಾವೂರು ಗ್ರಾಮ ಪ್ರಾಚೀನ ಕಾಲದಿಂದಲೂ ಬಹು ಪ್ರಸಿದ್ಧಿಯನ್ನು ಹೊಂದಿದೆ. ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಕೆಲವೊಂದು ಶಾಸನಗಳಲ್ಲಿ ರಾವೂರಿನ ಉಲ್ಲೇಖಗಳು ದೊರೆಯುತ್ತವೆ. ಪ್ರಾಚೀನ ಕಾಲದ ರಾಮಲಿಂಗೇಶ್ವರ ದೇವಾಲಯ, ವೆಂಕಟೇಶ್ವರ ದೇವಾಲಯ, ಈಶ್ವರ ದೇವಾಲಯಗಳಲ್ಲದೇ

ಅನೇಕ ದೇಗುಲಗಳು ಈ ಗ್ರಾಮದುದ್ದಕ್ಕೂ ಕಂಡುಬರುತ್ತವೆ. ಇವುಗಳಲ್ಲಿ ಹೆಚ್ಚಿನವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ವಾಸ್ತುರಚನೆಗಳಾಗಿವೆ. ಇಲ್ಲಿಯ ಜನರ ಮುಖ್ಯ ಕಸುಬು ಒಕ್ಕಲುತನ ಮತ್ತು ಕಲ್ಲಿನ ಗಣಿಗಾರಿಕೆ. ಇಲ್ಲಿನ ಕಲ್ಲಿಗೆ ರಾಜ್ಯವಲ್ಲದೆ ರಾಷ್ಟ್ರದೆಲ್ಲೆಡೆ ಬಹು ಬೇಡಿಕೆಯಿದೆ. 'ಶಹಾಬಾದ ಕಲ್ಲು' ಎಂದೇ ಇದು ಪ್ರಸಿದ್ಧಿಯನ್ನು ಪಡೆದಿದೆ. ಇಂಥ ಒಂದು ಕಲ್ಲುನಾಡಿನ ಪ್ರದೇಶದಲ್ಲಿ ಹೂವಾಗಿ ಅರಳಿದೆ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠ. ಈ ಮಠ ಸುಮಾರು ಮೂರು ಶತಮಾನಗಳಿಗೂ ಪುರಾತನವಾದುದು.

### ಶ್ರೀ ಸಿದ್ಧಲಿಂಗೇಶ್ವರ ಮಠದ ಹಿನ್ನೆಲೆ

ತೋಂಟದ ಸಿದ್ಧಲಿಂಗ ಯತಿಗಳು ನೂರೊಂದು ವಿರಕ್ತರೊಡಗೂಡಿ ಆಧ್ಯಾತ್ಮದ ಬಗ್ಗೆ ಉಪದೇಶಿಸುತ್ತ ನಾಡಿನ ಅನೇಕ ಕಡೆಗಳಲ್ಲಿ ಸಂಚಾರ ಕೈಗೊಂಡ ಸಂದರ್ಭದಲ್ಲಿ ಅನೇಕ ಮಠಗಳು ಹುಟ್ಟಿಕೊಂಡವು ಎಂಬ ಪ್ರತೀತಿ ಇದೆ. ಇದೇ ಅವಧಿಯಲ್ಲಿ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠ ನಿರ್ಮಾಣಗೊಂಡಿತೆಂದು ಹೇಳಲಾಗುತ್ತದೆ. ಈವರೆಗೆ ಶ್ರೀಮಠದಲ್ಲಿ ೧೨ ಜನ ಪೂಜ್ಯರು ಶ್ರೀಮಠದ ಪೀಠವನ್ನಲಂಕರಿಸಿದ್ದಾರೆ.[೨] ಹೊನಗುಂಟಿ, ಯನಗುಂಟಿ, ನಾಲವಾರ, ನರಬೋಳಿ, ಬಳ್ಳೊಡಗಿ, ಸಾತನೂರ, ಲಾಡ್ಲಾಪೂರ ಹೀಗೆ ಈ ಭಾಗದ ಬೇರೆ ಬೇರೆ ಕಡೆಗಳಲ್ಲಿ ಒಟ್ಟು ೧೬ ಶಾಖಾ ಮಠಗಳಿವೆ. ಆಂಧ್ರಪ್ರದೇಶದ ಆದೋನಿಯ ಮಂಡಿಗಿರಿ ಕಲ್ಲುಮಠವೂ ಸಹ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠದ ವ್ಯಾಪ್ತಿಯಲ್ಲಿ ಬರುವುದು. ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು[೩] ಈ ಎರಡೂ ಮಠಗಳ ಅಧಿಪತಿಗಳು.



ಶ್ರೀ ಸಿದ್ಧಲಿಂಗೇಶ್ವರ ಮಠ



Scanned with OKEN Scanner

ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಈ ಹಿಂದಿನ ಧಾರವಾಡ ಜಿಲ್ಲೆಯ ಕೋಟಬಾಗಿ ಗ್ರಾಮದ ಜಂಗಮ ಮನೆತನವೊಂದರಲ್ಲಿ ೧೯೦೭ರ ಜನೆವರಿ ೨೯ರಂದು ಜನಿಸಿದರು. ಲಿಂಗೈಕ್ಯ ಹಾನಗಲ್ಲ ಕುಮಾರಸ್ವಾಮಿಗಳಿಂದ ಸ್ಥಾಪಿತವಾದ ಶಿವಯೋಗ ಮಂದಿರದಲ್ಲಿ ಪೂಜ್ಯರು ಸುಮಾರು ೧೬ ವರ್ಷಗಳಕಾಲ ಕನ್ನಡ, ಸಂಸ್ಕೃತ ಮತ್ತು ಯೋಗಾಭ್ಯಾಸವನ್ನು ಕೈಗೊಂಡರು. ಸಂಸ್ಕೃತದ ಉಚ್ಚ ಶಿಕ್ಷಣಕ್ಕಾಗಿ ಕಾಶಿ ವಿದ್ಯಾಪೀಠದಲ್ಲಿ ೧೨ ವರ್ಷಗಳಕಾಲ ಅಧ್ಯಯನ ಮಾಡಿ 'ವ್ಯಾಕರಣ ಆಚಾರ್ಯ' ಪದವಿಯನ್ನು ಪಡೆದರು. ಪ್ರೌಢರಾಯನ ಕಾವ್ಯ, ಗುರುರಾಜ ಚಾರಿತ್ರ, ಲಿಂಗಲೀಲಾ ವಿಲಾಸ ಚಾರಿತ್ರ, ಶೂನ್ಯ ಸಂಪಾದನೆ ಮೊದಲಾದ ಗ್ರಂಥಗಳ ಸಂಪಾದನೆ, ಸಂಸ್ಕರಣ ಮಾಡುವಲ್ಲಿ ಮತ್ತು ಸ್ವತಃ ಹಸ್ತಪ್ರತಿ ಮಾಡಿ ವೀರಶೈವ ಸಾಹಿತ್ಯ ಅಭಿವೃದ್ಧಿಗೆ ಕಾರಣರಾದರು. ೧೯೪೪ರಲ್ಲಿ ಆದೋನಿಯ ಮಂಡಿಗಿರಿ ಕಲ್ಲುಮಠದ ಅಧಿಪತಿಗಳಾಗಿ, ೧೯೫೧ರಲ್ಲಿ ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠದ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಅಲ್ಲದೇ ಈ ಎರಡೂ ಮಠಗಳ ಜೀರ್ಣೋದ್ಧಾರ ಕೈಗೊಂಡು ಊರ್ಜಿತಾವಸ್ಥೆಗೆ ಕೊಂಡೊಯ್ದರು. ೧೯೬೦ರ ದಶಕದಲ್ಲಿ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಈಗಿರುವ ಪೀಠಾಧಿಪತಿಗಳಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳನ್ನು ತಮ್ಮ ಶಿಷ್ಯರನ್ನಾಗಿ ನೇಮಿಸಿಕೊಳ್ಳುತ್ತಾರೆ. ಸದ್ಯದ ಪೀಠಾಧಿಪತಿಗಳಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಪ್ರಾಥಮಿಕ ಶಿಕ್ಷಣ ಸ್ವಗ್ರಾಮ ರಾವೂರಿನಲ್ಲಾದರೆ, ಹೈಸ್ಕೂಲ್ ಶಿಕ್ಷಣ ಆದೋನಿಯಲ್ಲಾಯಿತು. ಮುಂದೆ ಹುಬ್ಬಳ್ಳಿಯಲ್ಲಿ ಪದವಿ ಶಿಕ್ಷಣ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಇದೇ ಅವಧಿಯಲ್ಲಿ (೧೯೭೩) ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಆದೋನಿಯ ಮಂಢಿಗಿರಿ ಕಲ್ಲುಮಠದ ಉತ್ತರಾಧಿಕಾರಿಯಾಗಿ ವಿಧಿವತ್ತಾಗಿ ಅಧಿಕಾರ ವಹಿಸಿಕೊಳ್ಳುತ್ತಾರೆ. ೧೯೭೪ರಲ್ಲಿ ಕಾಶಿಯ ಸಂಪೂರ್ಣಾನಂದ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷಕಾಲ ಇದ್ದುಕೊಂಡು ಸಂಸ್ಕೃತ ಅಧ್ಯಯನವನ್ನು ಪೂರ್ಣಗೊಳಿಸುತ್ತಾರೆ. ಹೀಗೆ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳು ಬಹು ಪದ್ಧತಿಯ ಪ್ರೌಢ ವಿದ್ಯೆಯನ್ನು ಮುಗಿಸಿಬಂದ ಮೇಲೆ ಮಠದ ಶ್ರೇಯಸ್ಸಿಗಾಗಿ ಸಾಕಷ್ಟು ಶ್ರಮವಹಿಸಿದ್ದಾರೆ.

## ಶ್ರೀಮಠದ ಶೈಕ್ಷಣಿಕ ಬೆಳವಣಿಗೆ

೧೯೭೩-೭೪ರಲ್ಲಿ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆ ಹುಟ್ಟುಹಾಕುವುದರೊಂದಿಗೆ ಮೊದಲಿಗೆ ಶ್ರೀ ವಿವೇಕಾನಂದ ಶಿಶುವಿಹಾರ ಹಾಗೂ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಯಿತು. ಪ್ರಾರಂಭವಾದ ಒಂದೆರಡು ವರ್ಷಗಳಲ್ಲಿ ಶಾಲೆಯು ಪ್ರಗತಿಯ ಹಾದಿಯಲ್ಲಿ ಸಾಗುತ್ತಿರಬೇಕಾದರೆ ೧೯೭೬ ಮೇ ೧೨ರಂದು ಹಿರಿಯ ಪೂಜ್ಯರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಲಿಂಗೈಕ್ಯರಾದರು. ಇದರಿಂದಾಗಿ ಮಠದ ಏನೆಲ್ಲ ಜವಾಬ್ದಾರಿಗಳನ್ನು ಸದ್ಯದ ಪೂಜ್ಯರು ವಹಿಸಿಕೊಳ್ಳುತ್ತಾರೆ. ಇವರು ಧರ್ಮ, ಆಧ್ಯಾತ್ಮ, ದಾಸೋಹ ಸೇವೆಗಳೊಂದಿಗೆ ಈ ಸಂಸ್ಥೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ದರು. ೧೯೮೦-೮೧ರಲ್ಲಿ ಹೈಸ್ಕೂಲ್ ತರಗತಿಗಳು ಪ್ರಾರಂಭಗೊಂಡವು. ಅದೇವರ್ಷ ನಾಡಿನ ಬೇರೆ



Scanned with OKEN Scanner

ಬೇರೆ ಕಡೆಗಳಿಂದ ವಿದ್ಯಾರ್ಜನೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯವನ್ನೂ ಆರಂಭಿಸಲಾಯಿತು. ಅಂದು ಕೇವಲ ಐದಾರು ಮಕ್ಕಳಿಂದ ಪ್ರಾರಂಭವಾದ ವಸತಿ ನಿಲಯದಲ್ಲಿಂದು ೨೫೦ಕ್ಕಿಂತಲೂ ಹೆಚ್ಚು ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

೧೯೬೪-೬೫ರಲ್ಲಿ ಪದವಿಪೂರ್ವ ಮಹಾವಿದ್ಯಾಲಯವನ್ನು ಆರಂಭಿಸಲಾಯಿತು. ಪ್ರಾರಂಭದಲ್ಲಿ ಕಲಾ ವಿಭಾಗವೊಂದನ್ನೇ ಆರಂಭಿಸಲಾಯಿತಾದರೂ ಒಂದೆರಡು ವರ್ಷಗಳ ಬಳಿಕ ವಿಜ್ಞಾನ ವಿಭಾಗವೂ ಪ್ರಾರಂಭಗೊಳ್ಳುತ್ತದೆ. ವಿಜ್ಞಾನ ತರಗತಿಗಳಿಗೆ ಅನುಕೂಲವಾಗುವಂತೆ ಸುಸಜ್ಜಿತವಾದ ಪ್ರಯೋಗಾಲಯವೊಂದು ಸಂಸ್ಥೆಯಡಿಯಲ್ಲಿ ನಿರ್ಮಾಣಗೊಂಡಿತು.[೪] ಹೀಗೆ ೧೯೮೦ರ ದಶಕದಲ್ಲಿ ಕೇವಲ ಐದಾರು ಮಕ್ಕಳಿಂದ ಸ್ಥಾಪಿತಗೊಂಡ ಈ ಸಂಸ್ಥೆಯಲ್ಲಿಂದು ೧೫೦೦ಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಈ ಸಂಸ್ಥೆಯ ಬೆಳವಣಿಗೆಯನ್ನು ಅರಿತುಕೊಳ್ಳಬಹುದು.


ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ಪಂಚಾಕ್ಷರಿ ಸಂಗೀತ ಪಾಠಶಾಲೆ, ಅಕ್ಕಮಹಾದೇವಿ ಬೆರಳಚ್ಚು ಕೇಂದ್ರ, ಗಣಕಯಂತ್ರ ವಿಭಾಗ, ಕುಮಾರೇಶ್ವರ ಸಂಸ್ಕೃತ ಪಾಠಶಾಲೆ ಇತ್ಯಾದಿ ಹಲವು ವಿಭಾಗಗಳನ್ನು ಆರಂಭಿಸುವುದರೊಂದಿಗೆ ಮಕ್ಕಳಿಗೆ ಸಾಮಾನ್ಯ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಕ್ಷೇತ್ರದ ತಿಳುವಳಿಕೆ ನೀಡುವಲ್ಲಿ ಪೂಜ್ಯರು ವಹಿಸಿದ ಪಾತ್ರವನ್ನು ಯಾರೂ ಮರೆಯುವಂತಿಲ್ಲ. ಇಂದು ಈ ಸಂಸ್ಥೆಯಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಜನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಶ್ರೀಮಠದ ಶ್ರೇಯಸ್ಸಿಗಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಪ್ರತಿವರ್ಷ ಡಿಸೆಂಬರ-ಜನೆವರಿ ತಿಂಗಳಲ್ಲಿ ಶಾಲಾಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶಾಲಾ ವಾರ್ಷಿಕೋತ್ಸವವು ಅತ್ಯಂತ ಸುವ್ಯವಸ್ಥಿತವಾಗಿ ನಡೆಯುತ್ತದೆ. ಅಲ್ಲದೇ ರಾಜ್ಯ ಹಾಗೂ ರಾಷ್ಟ್ರೀಯ ದಿನಗಳಂದು ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ವಿದ್ವಾಂಸರನ್ನು ಸನ್ಮಾನಿಸಿ ಗೌರವಿಸುವ ಸಂಪ್ರದಾಯವನ್ನು ಶ್ರೀಮಠವು ಕಳೆದೆರಡು ದಶಕಗಳಿಂದ ನಡೆಸಿಕೊಂಡು ಬರುತ್ತಿದೆ.

## ವಸತಿ ನಿಲಯದ ವ್ಯವಸ್ಥೆ

ಈ ಸಂಸ್ಥೆಯಲ್ಲಿನ ವಸತಿ ನಿಲಯದ ವಿದ್ಯಾರ್ಥಿಗಳ ದಿನಚರಿ ಅತ್ಯಂತ ಶಿಸ್ತಿನಿಂದ ಕೂಡಿದೆ. ಬೆಳಿಗ್ಗೆ ೪-೪೫ಕ್ಕೆ ಏಳುವುದು. ೫ ಗಂಟೆಗೆ ಪ್ರಾರ್ಥನೆ ನಂತರ ಲಘು ವ್ಯಾಯಾಮ ಇದಾದ ಮೇಲೆ ಸ್ನಾನ ಆಮೇಲೆ ಧ್ಯಾನ; ನಂತರದಲ್ಲಿ ವಿಶೇಷ ಅಧ್ಯಯನ ನಡೆಯುವದು. ಬೆಳಿಗ್ಗೆ ೮-೩೦ಕ್ಕೆ ಉಪಾಹಾರ ಅದಾದ ಮೇಲೆ ಶಾಲಾವಧಿ, ಮಧ್ಯಾಹ್ನ



Scanned with OKEN Scanner

೧-೩೦ ಗಂಟೆಗೆ ಊಟ, ೨-೦೦ ರಿಂದ ಮತ್ತೆ ಶಾಲಾವಧಿ ಸಾಯಂಕಾಲ ೫ ಗಂಟೆಗೆ ಆಟ-ಪಾಠಗಳು, ೬ ಗಂಟೆಗೆ ವಿಶೇಷ ಅಧ್ಯಯನ, ಸಾಯಂಕಾಲ ೮ ಗಂಟೆಗೆ ಪೂಜ್ಯರೊಂದಿಗೆ ಪ್ರಾರ್ಥನೆಯಲ್ಲಿ ತೊಡಗುವುದು. ಪ್ರಾರ್ಥನೆಯಾದ ಮೇಲೆ ಊಟ; ಆಮೇಲೆ ಮಲಗುವುದು. ಇದು ವಸತಿ ನಿಯಲದ ವಿದ್ಯಾರ್ಥಿಗಳ ದಿನನಿತ್ಯದ ಕಾಯಕ. ಇಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಒಂದೆಡೆಯೇ ಇರುವುದರಿಂದ ಇದೊಂದು ನಿವಾಸಸಹಿತ ವಿದ್ಯಾಕೇಂದ್ರವಾಗಿದೆ. ಒಂದರ್ಥದಲ್ಲಿ ಈ ಸಂಸ್ಥೆ ಪ್ರಾಚೀನ ಕಾಲದ ಗುರುಕುಲ ಶಿಕ್ಷಣದ ಪದ್ಧತಿಯನ್ನು ನೆನಪಿಗೆ ತರುತ್ತದೆ.

**ಶ್ರೀಮಠದ ಸಾಹಿತ್ಯಿಕ ಚಟುವಟಿಕೆ**

ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ೧೯೯೦ರ ದಶಕದಲ್ಲಿ ಶ್ರೀಮಠದಲ್ಲಿ ಸಂಶೋಧನ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವುದರೊಂದಿಗೆ ಸಂಶೋಧನೆಗೊಂದು ಹೊಸ ಆಯಾಮವನ್ನೇ ಸೃಷ್ಟಿಸಿದರು. ಈ ಒಂದು ನಿಟ್ಟಿನಲ್ಲಿ ಅನೇಕ ಮೌಲಿಕ ಗ್ರಂಥಗಳನ್ನು ಪ್ರಕಟಿಸುವುದರೊಂದಿಗೆ ಸಾಹಿತ್ಯ ವಲಯದಲ್ಲೂ ಶ್ರೀಮಠದ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿದ್ದಾರೆ. ಗೂಳೂರ ಸಿದ್ಧವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯ ಸಂಪಾದನೆ,[೫] ಶೂನ್ಯ ಸಂಪಾದನೆಯ ಪರಾಮರ್ಶೆ, ಪರಾಮರ್ಶೆಯ ವಿಮರ್ಶೆ, ಚಿಂತನಾಂಜಲಿ, Man the devine, ಪ್ರೇಮಿಲಿ ಬಬ್ರುವಾಹನ[೬] ಮೊದಲಾದ ಸಾಹಿತ್ಯ ಗ್ರಂಥಗಳು ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠ ಹಾಗೂ ಆದೋನಿಯ ಕಲ್ಲುಮಠದ ಪ್ರಕಾಶನದ ಅಡಿಯಲ್ಲಿ ಪ್ರಕಟಗೊಂಡಿವೆ. ಇದಲ್ಲದೆ ಶ್ರೀ ರೇವಣಸಿದ್ದಪ್ಪ ಭೈರಾಮಡಗಿ ಅವರ ಸಹಾಯದಿಂದ 'ಶ್ರೀ ಸಿದ್ಧಲಿಂಗೇಶ್ವರ ಭಕ್ತಿಗೀತೆ' ಧ್ವನಿಸುರುಳಿಯೂ ಹೊರಬಂದಿದೆ.

**ಶ್ರೀಮಠದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು**

ಸುಮಾರು ಮೂರು ಶತಮಾನಗಳಷ್ಟು ಪುರಾತನವಾದ ಶ್ರೀಮಠದ ವಾಸ್ತುರಚನೆಯಲ್ಲಿ ಪ್ರಮುಖವಾಗಿ ಜಾಲಂಧ್ರಗಳು, ಕಟಾಂಜನ ಹಾಗೂ ಕಂಬಗಳು ವಿಶಿಷ್ಟ ಕುಸುರಿ ಕೆತ್ತನೆಯಿಂದ ಕೂಡಿವೆ. ಸಂಪೂರ್ಣ ಜೀರ್ಣಗೊಂಡಿರುವ ಮಠದ ಕೆಲವೊಂದು ಭಾಗಗಳನ್ನು ನವೀಕರಿಸಲಾಗಿದೆ. ಆನಂತರದಲ್ಲಿ ನಿರ್ಮಿಸಲಾಗಿದ್ದೆಂದು ಹೇಳುವ ಈ ಮಠದ ಮುಂಭಾಗದಲ್ಲಿರುವ ಗದ್ದುಗೆಗಳಲ್ಲದೆ ಇತರ ವಾಸ್ತುರಚನೆಗಳು ಪರ್ಷಿಯನ್ ವಾಸ್ತುಶೈಲಿಯನ್ನು ಹೋಲುತ್ತವೆ. ಹಾಗಾಗಿ ಇದೊಂದು ಸರ್ವಧರ್ಮ ಸಮನ್ವಯಗಳ ಪ್ರತೀಕವಾಗಿದೆ. ಶ್ರೀಮಠದಲ್ಲಿ ಪ್ರತೀವರ್ಷ ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳೊಂದಿಗೆ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಚೈತ್ರಬಹುಳ ಅಷ್ಟಮಿಗೆ ಪಲ್ಲಕ್ಕಿ ಉತ್ಸವ, ಚೈತ್ರಬಹುಳ ನವಮಿಗೆ ನಂದಿಕೋಲು ಕುಣಿತ, ಪುರವಂತರಾಟ, ಡೊಳ್ಳುಕುಣಿತಗಳೊಂದಿಗೆ ರಥೋತ್ಸವವು ಬಹು ವಿಜೃಂಭಣೆಯಿಂದ ಜರುಗುತ್ತದೆ. ಜಾತ್ರೆಯ ಪ್ರಯುಕ್ತ ಗ್ರಾಮೀಣ ಪ್ರದರ್ಶನ ಕಲೆಗಳಾದ ಜಾನುವಾರುಗಳ ಪ್ರದರ್ಶನ, ಕುಸ್ತಿಪಂದ್ಯ, ಡೊಳ್ಳುಕುಣಿತ, ಗೀಗೀಪದ ಹೀಗೆ ಹತ್ತು ಹಲವು ಬಗೆಯ ಸ್ಪರ್ಧೆಗಳನ್ನು ಏರ್ಪಡಿಸುವುದರೊಂದಿಗೆ ಈ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸೂಕ್ತ ಬಹುಮಾನಗಳೂ ಸಹ ನೀಡಲಾಗುತ್ತದೆ. ಇದೇ ಸಂದರ್ಭದಲ್ಲಿ ನಾಡು-ನುಡಿಗೆ ವಿಶಿಷ್ಟ ಸೇವೆ ಸಲ್ಲಿಸಿದ ಕಲಾವಿದರಿಗೆ, ಸಾಹಿತಿಗಳಿಗೆ ಸನ್ಮಾನಿಸಿ ಗೌರವಿಸುವುದು ಶ್ರೀಮಠದ ಪರಂಪರೆಯಾಗಿದೆ.



Scanned with OKEN Scanner

ಒಟ್ಟಾರೆ ಶ್ರೀಮಠದ ಶೈಕ್ಷಣಿಕ ಶ್ರೇಯೋಭಿವೃದ್ಧಿಯಲ್ಲಿ ಪೂಜ್ಯರಲ್ಲದೇ ಊರಿನ ಹಿರಿಯರ ಶ್ರಮವೂ ಅಡಗಿದೆ ಎಂದು ಹೇಳಿದರೆ ತಪ್ಪಾಗಲಾರದು.

## ೧೯೯೯ ಮಹತ್ವದ ವರ್ಷ

೧೯೯೯ರ ಎಪ್ರಿಲ್ ತಿಂಗಳಲ್ಲಿ ಸದ್ಯದ ಪೂಜ್ಯರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವವು ವಿಧಿವತ್ತಾಗಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಸಕಲ ಜನಾಂಗದವರು ಸೇರಿ ನಡೆಸಿದ ಈ ಮಹೋತ್ಸವ ಈ ಭಾಗದ ಜನರ ಪಾಲಿಗೆ ಎಂದೂ ಮರೆಯದ ಕ್ಷಣವೆಂದೇ ಹೇಳಬಹುದು. ಈ ಮಹೋತ್ಸವದಲ್ಲಿ ಕರ್ನಾಟಕ ರಾಜ್ಯದ ಆಗಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಜೆ.ಹೆಚ್. ಪಟೇಲ್ ಅವರನ್ನು ಒಳಗೊಂಡಂತೆ ನಾಡಿನ ಅನೇಕ ಗಣ್ಯರು, ಹೆಸರಾಂತ ಸಾಹಿತಿಗಳು, ಕಲಾವಿದರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ 'ಅಲ್ಲಮ ಪ್ರಭುದೇವರ ಶೂನ್ಯ ಸಂಪಾದನೆ' ಗ್ರಂಥದ ಬಿಡುಗಡೆ, ಪ್ರಸಾದ ನಿಲಯದ ಉದ್ಘಾಟನೆ, ನೂತನ ರಥದ ಉದ್ಘಾಟನೆ ಮುಂತಾದ ಕಾರ್ಯಕ್ರಮಗಳು ಜರುಗಿದವು. ಸುಮಾರು ಒಂದು ತಿಂಗಳಕಾಲ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆದ ಈ ಪಟ್ಟಾಧಿಕಾರ ಮಹೋತ್ಸವ ಸವಿನೆನಪನ್ನು ನಿಜವಾಗಲೂ ಈ ಭಾಗದ ಜನರು ಎಂದೂ ಮರೆಯಲಾರರು.

**ಟಿಪ್ಪಣಿಗಳು**

೧. ಪ್ರಾಚೀನ ಕಾಲದಲ್ಲಿ ಅಗ್ರಹಾರಗಳು, ಬ್ರಹ್ಮಪುರಿಗಳು, ದೇವಾಲಯಗಳಂತೆ ಮಠಗಳೂ ಶಿಕ್ಷಣ ಕೇಂದ್ರಗಳಾಗಿದ್ದವು. ಪ್ರಾಚೀನ ಕರ್ನಾಟಕದ ಬಳ್ಳಿಗಾವೆ, ನಾಗಾವಿ, ಸಾಲೋಟಗಿ ಮುಂತಾದ ಸ್ಥಳಗಳಲ್ಲಿ ದೊರಕಿರುವ ಶಾಸನಾಧಾರಗಳಿಂದ ಈ ವಿಷಯ ತಿಳಿದುಬರುತ್ತದೆ.

೨. ಈಗಲೂ ಈ ಸಮಾಧಿಗಳನ್ನು ಮಠದ ಸುತ್ತಮುತ್ತಲಿನಲ್ಲಿರುವುದನ್ನು ನಾವು ನೋಡಬಹುದಾಗಿದೆ.

೩. ಶ್ರೀ ಷಣ್ಮುಖ ಶಿವಯೋಗಿಗಳು ಎಂಬುದು ಇವರ ಮೂಲನಾಮ. ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಮಠದ ಪೀಠಾಧಿಪತಿಗಳಾದ ಮೇಲೆ ಮಠದ ಪರಂಪರೆಯಂತೆ ಇವರನ್ನು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳೆಂದೇ ಸಂಬೋಧಿಸಲಾಗುತ್ತದೆ. ಇವರು ೧೯೭೩ರಲ್ಲಿ ಆಂಧ್ರದ ಆದೋನಿಯ ಕಲ್ಲುಮಠದಲ್ಲಿ ಶ್ರೀ ಬಸವೇಶ್ವರ ಉಚಿತ ಪ್ರಸಾದ ನಿಲಯವನ್ನು ಸ್ಥಾಪಿಸಿ ತನ್ಮೂಲಕ ಆಂಧ್ರಪ್ರದೇಶದಲ್ಲಿ ಪ್ರಪ್ರಥಮವಾಗಿ ವೀರಶೈವ ಪ್ರಸಾದ ನಿಲಯ ಸ್ಥಾಪಿಸಿದ ಶ್ರೇಯಸ್ಸು ಇವರದ್ದಾಗಿದೆ.

೪. ಈ ವಿಭಾಗವು ನಾಲ್ಕೈದು ವರ್ಷಗಳಕಾಲ ಚನ್ನಾಗಿಯೇ ಕಾರ್ಯನಿರ್ವಹಿಸಿತ್ತಾದರೂ ಮುಂದೊಮ್ಮೆ ಕಾರಣಾಂತರಗಳಿಂದ ಸ್ಥಗಿತಗೊಂಡಿತು.

೫. ಪ್ರೊ. ಸಂ.ಶಿ. ಭೂಸನೂರಮಠ ಅವರು ಈ ಸಾಹಿತ್ಯ ಗ್ರಂಥವನ್ನು ಸಂಪಾದಿಸಿದ್ದು, ರಾವೂರಿನ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನದಡಿಯಲ್ಲಿ ಈ ಗ್ರಂಥದ ನಾಲ್ಕನೆಯ ಆವೃತ್ತಿಯು ಪ್ರಕಟಗೊಂಡಿದೆ.

೬. ಶರಣಪ್ಪ ಜಾಡರ ಅವರು ರಚಿಸಿದ ಬಯಲಾಟವಿದು. ಇದನ್ನು ಪ್ರೊ. ಎಂ.ಎಸ್. ಲಠ್ಠೆಯವರು ಸಂಪಾದಿಸಿದ್ದಾರೆ.

.....................

ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಯು ೨೦೦೭ರಲ್ಲಿ ಪ್ರಕಟಿಸಿದ **"ರಾಜ್ಯದ ಮಠ-ಪೀಠಗಳ ದರ್ಶನ"** ಎಂಬ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಪುಟ : ೧೨೪.



Scanned with OKEN Scanner